**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ತಿಪಟೂರು**

**ಸಿ.ಸಿ. ನಂ. 1537/2017** **ಪ್ರಾ.ಸಾ – 7**
**ಚಾ.ಸಾ –8**

**ದಿನಾಂಕ: 29.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ದ್ರಾಕ್ಷಾಯಿಣಿ |
| ಗಂಡನ ಹೆಸರು | : | ಶ್ರೀಧರ್ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಪಿ.ಎಸ್.ಐ<br>ಚಿ.ನಾ.ಹಳ್ಳಿ ಪೊಲೀಸ್ ಠಾಣೆ |
| ವಾಸಸ್ಥಳ | : | ಚಿ.ನಾ.ಹಳ್ಳಿ |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ನಾನು ಜೂನ್ 2016 ರಿಂದ ಮಾರ್ಚ್ 2018 ರವರೆಗೆ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 11-08-2017 ರಂದು ಸಾಯಂಕಾಲ 4-30 ಗಂಟೆ ಸಮಯದಲ್ಲಿ ಚಾಸಾ-6 ರವರು ಹಾಜರಾಗಿ ಆರೋಪಿ, ಆತನ ನೊಂದಣಿಯಿಲ್ಲದ ವಾಹನ ಹಾಗೂ ವಿವಿಧ ಬ್ರ್ಯಾಂಡ್ ಗಳ ಮದ್ಯದ ಟೆಟ್ರಾ ಪ್ಯಾಕೇಟ್ ಗಳ ಬಾಕ್ಸ್ ಗಳನ್ನು ವರದಿ ಸಮೇತ ತಂದು ಹಾಜರುಪಡಿಸಿದ್ದು ಅದರ ಮೇಲೆ ನಾನು ಠಾಣಾ ಮೊಕದ್ದಮೆ ಸಂಖ್ಯೆಃ 118/2017 ರಂತೆ ಮೊಕದ್ದಮೆಯನ್ನು ದಾಖಲಿಸಿ ಪ್ರ.ವ.ವರದಿಯನ್ನು ತಯಾರಿಸಿ ಒಂದು ಪ್ರತಿಯನ್ನು ನ್ಯಾಯಾಲಯಕ್ಕೆ ಮತ್ತೊಂದು ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ನಾನು ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-9 ರವರಿಗೆ ವಹಿಸಿ ಕೊಟ್ಟಿರುತ್ತೇನೆ. ಮುದ್ದೆಮಾಲುಗಳ ಬಾಕ್ಸಿನ ಒಳಗೆ ಇದ್ದು ಮುದ್ದೆಮಾಲುಗಳನ್ನು ನಾನು ತೆರೆದು ನೋಡಿರುವುದಿಲ್ಲ, ಬಾಕ್ಸಿನ ಸಮೇತ ಚಾಸಾ-9 ರವರಿಗೆ ಕಡತವನ್ನು ವಹಿಸಿ ಕೊಟ್ಟಿರುತ್ತೇನೆ. ಸಾಕ್ಷಿಯು ನಿಪಿ-7 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲಿರುವ ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ದಾಖಲಾತಿಯನ್ನು ನಿಪಿ-8 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು

ಗುರುತಿಸಲಾಯಿತು. ಸಾಕ್ಷಿಯು ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತನು ಗೈರು ಹಾಜರಿದ್ದು ಆತನ ಗೈರು ಹಾಜರಾತಿಗೆ ಆತನ ಪರವಾಗಿ ವಕೀಲರು ಅರ್ಜಿಯನ್ನು ಸಲ್ಲಿಸಿದ್ದು ಆತನ ಗುರುತಿಸುವಿಕೆಗೆ ಯಾವುದೇ ಆಕ್ಷೇಪಣೆ ಇಲ್ಲವೆಂದು ನುಡಿದಿರುತ್ತಾರೆ. ಸಾಕ್ಷಿಯು ಗಾಡಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ. B.S.R ವಕೀಲರಿಂದ :-**

ನಿಪಿ-7 ದೂರನ್ನು ಚಾಸಾ-1 ರವರು ಕೊಟ್ಟಿರುತ್ತಾರೆ. ಸದರಿ ದೂರನ್ನು ಎಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ-7 ರೊಂದಿಗೆ 4 ಬಾಕ್ಸ್ ಗಳು, ಆರೋಪಿ ಮತ್ತು ನೊಂದಣಿಯಿಲ್ಲದ ನಂಬರ್ ಪ್ಲೇಟ್ ಇಲ್ಲದ ಒಂದು ಆ್ಯಕ್ಟೀವಾ ಗಾಡಿ ತಂದು ಹಾಜರುಪಡಿಸಿರುತ್ತಾರೆ. ಕಡತವನ್ನು ಅದೇ ದಿನ ಚಾಸಾ-9 ರವರೊಂದಿಗೆ ವಹಿಸಿ ಕೊಟ್ಟಿರುತ್ತೇನೆ.

ಚಾಸಾ-1 ರವರು ಠಾಣೆಗೆ ಬಂದು ಹಾಜರಾಗಿರುವುದಿಲ್ಲ, ಅವರು ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖೆಯ ಅಂಕಿ ಸಂಖ್ಯೆಗಳಿಗೋಸ್ಕರ ಆರೋಪಿತನ ವಿರುದ್ಧ ಸುಳ್ಳು ದೂರನ್ನು ತಯಾರಿಸಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**